ದಿನಾಂಕಃ 02-11-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 2 ನೇ ಆರೋಪಿಯ ಪರ ವಕೀಲರಿಂದಃ

11) ನಾನು ವ್ಯವಸಾಯದ ಕೆಲಸ ಮಾಡುತ್ತೇನೆ. ಕೂಲಿಕೆಲಸಕ್ಕೆ ಹೋದರೆ ಬೆಳಗಿನಿಂದ ಸಂಜೆಯವರಿಗೂ ಮಾಡಬೇಕಾಗುತ್ತದೆ ಅಂದರೆ ಸರಿ. ಜಮೀನಿನ ವಿಚಾರದಲ್ಲಿ ರಾಜನಾಯಕನಿಗೂ ಮತ್ತು ಸೇವಾನಾಯಕನಿಗೂ ಮನಸ್ತಾಪವಿದೆ ಅಂದರೆ ನನಗೆ ಗೊತ್ತಿಲ್ಲ. ನಾನು ಘಟನೆ ಸ್ಥಳಕ್ಕೆ ಹೋಗಿರುವುದಿಲ್ಲ ಮತ್ತು ಯಾವುದೇ ವಿಚಾರ ನನಗೆ ಗೊತ್ತಿಲ್ಲ ಅಂದರೆ ಸರಿಯಲ್ಲ. ಸೇವಾನಾಯಕನು ನಮ್ಮ ಊರಿನವನು. ಸೇವಾನಾಯಕನಿಗೂ ಮತ್ತು ನನಗೂ ವಿಶ್ವಾಸವಿರುವುದರಿಂದ ಅವನಿಗೆ ಸಹಾಯ ಮಾಡುವ ಸಲುವಾಗಿ ಈ ನ್ಯಾಯಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

(ಈ ಹಂತದಲ್ಲಿ 2 ನೇ ಆರೋಪಿ ಯ ಪರ ವಕೀಲರ ವಿನಂತಿಯ ಮೇರೆಗೆ ಉಳಿದ ಪಾಟೀ ಸವಾಲನ್ನು 1 ನೇಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳಲಾಯಿತು. )

- ಮರುವಿಚಾರಣೆ ಇಲ್ಲ-

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇ ಸ ಇದೆ ಎಂದು ಒಪ್ಪಿದ್ದಾರೆ.

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು